ನನ್ನ ಮಿತ್ರ ಅಡ್ಡಂಡ ಕರಮಚಂದ ಬಗೆಹರಿಸಿದ ಈ ಪ್ರಸಂಗ ನಡೆದದ್ದು ಜುಲೈ ತಿಂಗಳ ಮಧ್ಯ ಭಾಗದಲ್ಲಿ. ಆವತ್ತು ಎರಡನೇ ಶನಿವಾರ. ನ್ಯಾಯಾಲಯಕ್ಕೆ ರಜೆ. ನಾವು ನಮ್ಮ ಮನೆ ಕಚೇರಿಯಲ್ಲೇ ಇದ್ದೆವು. ಸುಮಾರು ಹನ್ನೊಂದೂವರೆಯ ಹೊತ್ತಿಗೆ ಹೊರಗಡೆ ಕಾರೊಂದು ನಿಂತ ಸದ್ದು, ಮೆಟ್ಟಿಲಲ್ಲಿ ಹೆಜ್ಜೆ ಸಪ್ಪಳ ಕೇಳಿಬಂತು. ಕೆಲಕ್ಷಣಗಳಲ್ಲೇ ಒಬ್ಬ ಮಧ್ಯವಯಸ್ಕ, ಮಾಟವಾದ ಮೈಕಟ್ಟಿನ ಹೆಂಗಸು ಬಾಗಿಲ ಬಳಿ ಕಾಣಿಸಿಕೊಂಡಳು.

ಆರ್ಜಿ ಗ್ರಾಮದ ಚಂಪಕ ದೇವಯ್ಯ ಎಂದು ತನ್ನನ್ನು ಪರಿಚಯಿಸಿಕೊಂಡ ಆಕೆ ಚುಟುಕಿನಲ್ಲಿ ತನ್ನ ಸಮಸ್ಯೆ ವಿವರಿಸಿದಳು. ಆಕೆಯ ಗಂಡ ಅಲ್ಲಿ ಒಂದು ಪೇಯಿಂಗ್ ಗೆಸ್ಟ್ ಹೌಸನ್ನು ನಡೆಸುತ್ತಿದ್ದು, ಹತ್ತು–ಹನ್ನೆರಡು ಯುವಕರು ಬಾಡಿಗೆಗೆ ಇದ್ದಾರೆ. ಈ ದಿನ ಬೆಳಿಗ್ಗೆ ಸುಮಾರು ಹತ್ತರ ಹೊತ್ತಿಗೆ ಆಕೆಯ ಮನೆಯಲ್ಲಿ ಒಂದು ಕಳ್ಳತನ ನಡೆಯಿತಂತೆ. ಕದ್ದು ಹೋದ ಹಣ ಕೇವಲ ಎರಡು ಸಾವಿರ ರೂಪಾಯಿ ಮಾತ್ರ. ಅದೇನೂ ದೊಡ್ಡ ಮೊತ್ತವಲ್ಲ. ಹಾಗಾಗಿ ಆಕೆಯ ಗಂಡ ಚಕ್ಕೇರ ದೇವಯ್ಯ ಪೊಲೀಸಿಗೆ ದೂರು ಕೊಡುವುದು ಬೇಡ ಎಂದನಂತೆ. ಆದರೂ ಆಕೆಗೆ ಅದರಲ್ಲೇನೋ ವಿಚಿತ್ರವಿದೆಯೆಂದು ಅನ್ನಿಸಿ, ಕರಮಚಂದನನ್ನು ಕಾಣಲು ಬಂದಿದ್ದಳಂತೆ.

'ನಿಮ್ಗೆ ಅದರಲ್ಲಿ ವಿಚಿತ್ರವೇನು ಕಂಡಿತು?'

'ನಮ್ಮ ಮನೆಯಲ್ಲಿ ಒಂದು ಲಾಕರ್ ಇದೆ. ಅದರೊಳಗಿನಿಂದ ಹಣ ಅಪಹರಿಸಲಾಗಿತ್ತು. ಕದ್ದು ಹೋಗಿದ್ದು ಹತ್ತು ರೂಪಾಯಿಯ ನೋಟಿನ ಒಂದು ಕಟ್ಟು. ಅದರೊಳಗೆ ಎರಡು ಸಾವಿರ ಮತ್ತು ಐನೂರರ ನೋಟಿನ ಕಟ್ಟುಗಳಿದ್ದವು. ಅದನ್ನೆಲ್ಲಾ ಬಿಟ್ಟು ಕೇವಲ ಹತ್ತು ರೂಪಾಯಿಯ ನೋಟನ್ನು ಏಕೆ ಕಳ್ಳ ಒಯ್ದ?'

'ಓಹ್! ಕಳ್ಳನಿಗೆ ಕ್ಲೆಪ್ಟೋಮೇನಿಯಾ ಇರಬಹುದೇ? ಅಂದರೆ ಸಣ್ಣ ಸಣ್ಣ ವಸ್ತುಗಳನ್ನು ಕದಿಯುವ ಚಟ. ಒಂದು ಬಗೆಯ ಮಾನಸಿಕ ರೋಗ. ಅಂತಹ ವಸ್ತುಗಳಿಂದ ಉಪಯೋಗವಿಲ್ಲದಿದ್ದರೂ, ಆರ್ಥಿಕ ಲಾಭವಿಲ್ಲದಿದ್ದರೂ ಕದಿಯುವ ಮನೋವ್ಯಾಧಿ.'

'ಇರಬಹುದೇನೋ. ಲಾಕರ್ ಇದ್ದ ಕೋಣೆಗೆ ಹೊಂದಿಕೊಂಡೇ ಬಚ್ಚಲುಮನೆ. ನಾನು ಒಂಬತ್ತೂಮುಕ್ಕಾಲರ ಹೊತ್ತಿಗೆ ಸ್ನಾನಕ್ಕೆ ಹೋಗಿದ್ದೆ. ನಮ್ಮೆಜಮಾನರು, ದಿನಪತ್ರಿಕೆ ತರಲಿಕ್ಕೆ ಅಂತ ಆಗಷ್ಟೇ ಹೊರಹೋಗಿದ್ದರು. ನಾನು ಸ್ನಾನಕ್ಕೆ ಶುರು ಮಾಡಿ ಕೆಲಕ್ಷಣಗಳಾಗಿತ್ತಷ್ಟೇ. ಅಷ್ಟರಲ್ಲಿ, ಅವರು ಅರ್ಧದಲ್ಲೇ ಹಿಂತಿರುಗಿ ಬಂದು, ಅಂಚೆಗೆ ಹಾಕಬೇಕಾದ ಕಾಗದ ಎಲ್ಲಿಟ್ಟಿದ್ದೀ ಅಂತ ನನ್ನನ್ನ ಗಟ್ಟಿಯಾಗಿ ಕೇಳಿದರು. ನಾನು ಅದು ಷೋಕೇಸಲ್ಲಿದೆ ಅಂತಂದೆ. ಅವರು ಪತ್ರ ತೆಗೆದುಕೊಂಡು ಹೋದ್ರು. ಸುಮಾರು ಹತ್ತು ನಿಮಿಷದಲ್ಲಿ ನಾನು ಸ್ನಾನ ಮುಗಿಸಿ ಹೊರಬಂದೆ. ತುಸು ಹೊತ್ತಲ್ಲಿ ಯಜಮಾನ್ರು ವಾಪಾಸು ಬಂದ್ರು. ಹತ್ತೂವರೆಯ ಹೊತ್ತಿಗೆ ನಮ್ಮೆಜಮಾನರು ಲಾಕರ್ ತೆರೆಯಬೇಕೆಂದುಕೊಂಡಾಗ, ಅದರ ಕೀ ನಾಪತ್ತೆಯಾಗಿದ್ದನ್ನು ಗಮನಿಸಿದರು. ಕೀಯನ್ನು ಅಲ್ಲೇ ಇದ್ದ ಷೋಕೇಸಿನ ಫೋಟೋವೊಂದರ ಹಿಂಭಾಗದಲ್ಲಿರಿಸುವುದು ರೂಢಿ. ಅಲ್ಲಿ ಕೀ ಕಾಣಲಿಲ್ಲ. ಅವರು ನನ್ನನ್ನು ವಿಚಾರಿಸಿದರು. ನಾನು ಕೀ ತೆಗೆಯಲಿಲ್ಲವೆಂದೆ. ತುಸು ಹುಡುಕಾಡಿದಾಗ, ಲಾಕರ್ ಇರಿಸಿದ್ದ ಸ್ಟ್ಯಾಂಡಿನ ಅಡಿಭಾಗದಲ್ಲಿ ಅದು ಕಂಡಿತು. ಅಲ್ಲಿ ಹೇಗೆ ಬಂತೆಂದು ನಮಗೆ ಅಚ್ಚರಿಯಾಯ್ತು. ಅನುಮಾನದಿಂದ ಲಾಕರ್ ತೆರೆದು ನೋಡಿದಾಗ, ಹಿಂದಿನ ದಿನವಷ್ಟೇ ಜೋಡಿಸಿಟ್ಟಿದ್ದ ಹತ್ತು ರೂಪಾಯಿಗಳ ನೋಟಿನ ಕಟ್ಟು ಮಾಯ. ಉಳಿದ ಹಣವೆಲ್ಲಾ ಹಾಗೆಯೇ ಇತ್ತು.'

'ಒಟ್ಟು ಎಷ್ಟು ಹಣವಿತ್ತು?'

'ಸುಮಾರು ಎರಡೂವರೆ ಲಕ್ಷ'

'ಭಾರೀ ಮೊತ್ತವೇ ಇತ್ತು!' ನಾನು ಉದ್ಗರಿಸಿದೆ.

'ಬಿದ್ದಪ್ಪ, ಹೊತ್ತೊಯ್ಯಲು ಕಷ್ಟವಾಗುವಷ್ಟು ದೊಡ್ಡದೇನಲ್ಲ. ಹಾಂ, ನಿಮ್ಮೆಜಮಾನರು ಹೊರಗೆ ಹೋದಾಗ, ಮುಖ್ಯದ್ವಾರದ ಬಾಗಿಲು ಹಾಕಿಹೋಗಿದ್ದರೆ?'

'ಇಲ್ಲ. ಸಾಮಾನ್ಯವಾಗಿ ಅದು ತೆರೆದೇ ಇರುತ್ತೆ. ನಮ್ಮ ಮನೆ ಮುಖ್ಯ ರಸ್ತೆಯಿಂದ ಒಂದು ಕಿಲೋಮೀಟರ್ ಒಳಗಡೆಯಿದೆ. ಸುತ್ತಲೂ ತೋಟ. ಎರಡು ನಾಯಿಗಳಿವೆ. ಅಪರಿಚಿತರು ಬಂದರೆ ತಕ್ಷಣ ಗೊತ್ತಾಗುತ್ತೆ.'

'ನಿಮ್ ಮನೆಯಲ್ಲಿ ಯಾರೆಲ್ಲಾ ಇದ್ದೀರಿ?'

'ನಾವಿಬ್ಬರು ಮತ್ತು ಅಡಿಗೆಯಾಳು ಕರ್ತಚಿರ ಚರ್ಮಣ್ಣ. ಅವನು ಸುಮಾರು ಹದಿನೈದು ವರ್ಷಗಳಿಂದ ನಮ್ ಜೊತೆ ಇದಾನೆ. ಮನೆಯವನಂತೆಯೇ ಆಗಿದ್ದಾನೆ.'

'ಓಹ್! ನಿಮಗೆ ಈಗ ಆ ಹತ್ತು–ಹನ್ನೆರಡು ಬಾಡಿಗೆಯವರ ಮೇಲೆ ಅನುಮಾನ, ಅಲ್ವೇ?'

'ಹತ್ತು–ಹನ್ನೆರಡು ಅಲ್ಲ. ಎಂಟು ಜನ ಊರಿಗೆ ಹೋಗಿದ್ದಾರೆ. ಈಗಿರೋದು ನಾಲ್ಕು ಮಂದಿ. ಅವರಲ್ಲಿ ಯಾರೋ ಒಬ್ಬರು ಕದ್ದಿರಬೇಕು ಅಂತ. ಅವರ ರೂಮಿನೊಳಗೆ ಹೋಗಿ ತನಿಖೆ ಮಾಡೋಕೆ ಮುಜುಗರ ಆಗುತ್ತೆ.'

'ಹಾಗಿದ್ರೆ ನಮ್ಮ ಹುಡುಕಾಟದ ಪರಿಧಿ ಕಿರಿದಾಯಿತು. ಈಗ ಆ ನಾಲ್ವರ ಬಗ್ಗೆ ಹೇಳ್ಬಹುದೇ?'

'ಒಬ್ಬ ರಕ್ಷಿತ್ ತಿಮ್ಮಯ್ಯ. ಯಾವ್ದೋ ಸಹಕಾರಿ ಬ್ಯಾಂಕಲ್ಲಿ ಇದ್ದಾನೆ. ಇನ್ನೊಬ್ಬ ಮಂದೇಪಂಡ ಲೋಕೇಶ್. ಅರೆಕಾಲಿಕ ಉಪನ್ಯಾಸಕ. ಇನ್ನಿಬ್ಬರು ಇಂಜಿನಿಯರಿಂಗ್ ವಿದ್ಯಾರ್ಥಿಗಳು. ಸುನಿಲ್ ಮುದ್ದಪ್ಪ ಮತ್ತು ಸಚಿನ್ ಕುಟ್ಟಯ್ಯ. ಎಲ್ಲರಿಗೂ ಪ್ರತ್ಯೇಕ ಕೊಠಡಿಗಳಿವೆ.'

'ಇವರಲ್ಲಿ ಹಣದ ಅಗತ್ಯ ಇದ್ದವರಾರು?'

'ಇದ್ದುದರಲ್ಲಿ ಬಡವ ಅಂದ್ರೆ ಲೋಕೇಶ್. ಶ್ರೀಮಂತ ಅಂದ್ರೆ ಸಚಿನ್. ಆದ್ರೆ ಯಾರಿಗೂ ತೀರಾ ಹಣದ ಅಗತ್ಯ ಇದ್ದಂತೆ ಅನಿಸೋದಿಲ್ಲ. ಇವತ್ತು ಮಧ್ಯಾಹ್ನ ಎಲ್ಲರೂ ಊಟಕ್ಕೆ ಇದ್ದಾರೆ. ಅಂದ್ರೆ ಅವರು ಹೊರಗೆ ಹೋಗ್ತಾ ಇಲ್ಲ. ನೀವೊಮ್ಮೆ ಬಂದು ತನಿಖೆ ಮಾಡ್ತಾ ಇದ್ರೆ ಚೆನ್ನಾಗಿತ್ತು ಅವರು ಹೊರಗಡೆ ಹೋಗುವ ಮೊದಲು.'

ಆಕೆಯ ಕೋರಿಕೆಗೆ ಕರಮಚಂದ ಸಮ್ಮತಿಸಿದ.

